ಅ) ಬಂದಿದೆ

ಆ) ದುರುಪಯೋಗವನ್ನು ತಪ್ಪಿಸಲು ಹೆಚ್ಚಿನ ನಿಬಂಧನೆಗಳನ್ನು ವಿಧಿಸಲು ಯೋಜಿಸಲಾಗುತ್ತದೆ. ಮತ್ತು 1992-93 ಸಾಲಿನಿಂದ ಅಂದರೆ ಮುಂದಿನ ವರ್ಷದ ರಿಯಾಯಿತಿಯಲ್ಲಿ ಪಾಸುಗಳಿಗೆ ಈಗ ಇರುವ ನಿಬಂಧನೆಗಳನ್ನು ಬದಲಾಯಿಸಲಾಗುವುದು.

ಆನೇಕಲ್ ತಾಲ್ಲೂಕು ಸಿ.ಡಿ. ಹೊಸಕೋಟೆಯಲ್ಲಿ ಉಪಾಧ್ಯಾಯರುಗಳ ಕೊರತೆ

2266 ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ತಾಲ್ಲೂಕು ಸಿ.ಡಿ. ಹೊಸಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿರುವ ತರಗತಿಗಳ ಹಾಗೂ ವಿದ್ಯಾರ್ಥಿಗಳ ಸಂಖ್ಯೆಯೆಷ್ಟು?

ಆ) ಮೇಲ್ಕಂಡ ಶಾಲೆಯಲ್ಲಿರುವ ಉಪಾದ್ಯಾಯರ ಸಂಖ್ಯೆ ಎಷ್ಟು?

ಇ) ಈ ಶಾಲೆಯಲ್ಲಿ ವಿದ್ಯಾರ್ಥಿಗನುಗುಣವಾಗಿ ಉಪಾಧ್ಯಾಯರಿಲ್ಲದೇ ಇರುವುದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿಲ್ಲವೆ? ಹಾಗಿದ್ದಲ್ಲಿ ಹೆಚ್ಚುವರಿ ಉಪಾಧ್ಯಾಯರನ್ನು ನೇಮಕಾತಿ ಮಾಡದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಆನೇಕಲ್ ತಾಲ್ಲೂಕು ಸಿ.ಡಿ. ಹೊಸಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿರುವ ತರಗತಿಗಳ ಸಂಖ್ಯೆ 1 ರಿಂದ 7ನೇ ತರಗತಿ ವಿದ್ಯಾರ್ಥಿಗಳ ಸಂಖ್ಯೆ 243 : 260

ಆ) ಉಪಾಧ್ಯಾಯರುಗಳ ಸಂಖ್ಯೆ 4

ಇ) ಹೌದು ಕೊರತೆ ಇರುವುದು ಈಗ ಕಂಡು ಬಂದಿದೆ. ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಪ್ರಮಾಣ

2133 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ವಿದ್ಯುಚ್ಛಕ್ತಿಯ ಬೇಡಿಕೆಯ ಪ್ರಮಾಣವೆಷ್ಟು?

ಆ) ಈಗ ಉತ್ಪಾದನೆ ಆಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು?

ಇ) ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಸರ್ಕಾರದ ಮುಂದೆ ಇರುವ ಕಾರ್ಯಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ಅನಿರ್ಬಂಧಿತ ವಿದ್ಯುಚ್ಛಕ್ತಿ ಬೇಡಿಕೆಯ ಪ್ರಮಾಣ ವರ್ಷಕ್ಕೆ ಸರಾಸರಿ 23,472 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ.

ಆ) ಪ್ರಸ್ತುತ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 2970 ಮೆ. ವ್ಯಾ ಆಗಿದ್ದು ಆದರಿಂದ ವಾರ್ಷಿಕ 13665 ಮಿಲಿಯ ಯೂನಿಟ್ ವಿದ್ಯುಚ್ಛಕ್ತಿ ಉಪ್ಪಾದನೆ ಆಗುತ್ತದೆ. (ವಿವರಗಳನ್ನು ಲಗತ್ತಿಸಿದೆ) ಇದು 210 ಮೆ. ವ್ಯಾ. ಸಾಮರ್ಥ್ಯದ ವಾರ್ಷಿಕ 1150 ಮೆ.ಯು.ಉತ್ಪಾದನೆಯ ರಾಯಚೂರು ಶಾಖೋತ್ಪನ್ನದ 3ನೇ ಘಟಕದಿಂದ ಉತ್ಪಾದನೆ ಯಾಗುತ್ತಿರುವ ವಿದ್ಯುತ್‌ನ್ನು ಒಳಗೊಂಡಿದೆ. ಈ ಘಟಕವು 1991ನೇ ಮಾರ್ಚಿನಲ್ಲಿ ಚಾಲೂ ಆಗಿ ರಾಜ್ಯದ ವಿದ್ಯುತ್ ಜಲಕ್ಕೆ ಸೇರಿದ್ದು 1991ರ ಸೆಪ್ಟೆಂಬರ್ ಹೊತ್ತಿಗೆ. ವಾಣಿಜ್ಯಕವಾಗಿ ವಿದ್ಯುತ್ ಉತ್ಪಾದಿಸುವ ನಿರೀಕ್ಷೆ ಇದೆ.